ಇವರಿಗೆ ಪರಿಚಯದವನಲ್ಲ. ಆಟೋದವರು ಸಾಮಾನ್ಯವಾಗಿ ತಾವು ಹೇಳಿದ ಕಡೆ ಬರಲಾರರು ಅನ್ನುವ ಅನುಮಾನ ಈ ಕಳ್ಳರದ್ದು. ಹಾಗಾಗಿ ಅವರೇ ಇವನನ್ನು 'ಯಾವ ಕಡೆ ಹೊಂಟೀಯಣ್ಣಾ?...' ಅಂತ ಕೇಳುತ್ತಾರೆ. ಚಾಲಕ ಇಂಥಾ ಕಡೆ ಅಂದೊಡನೆ 'ಹೋಗೋ ಮಧ್ಯದಲ್ಲಿ ನನ್ನನ್ನ ಈ ಜಾಗದಲ್ಲಿ ಇಳಿಸಿಬಿಡು' ಅಂತ ಅನುಮತಿಗೂ ಕಾಯದೆ ಹತ್ತಿಕೊಂಡು ಬಿಡುತ್ತಾರೆ. ಆಟೊ ಮೀಟರಿನ ಕಡೆಗೆ ಇವರ ಗಮನವಿರುವುದಿಲ್ಲ. ಚೌಕಾಸಿ ಮಾಡಬೇಕೆಂಬ ಇರಾದೆಯಿರುವುದಿಲ್ಲ. ಕೇಳಿದಷ್ಟು ದುಡ್ಡು ಕೊಟ್ಟು ಇಳಿದು ನಡೆದುಬಿಡುತ್ತಾರೆ. ಆಟೊದವನ ಅನುಮಾನ ಗಟ್ಟಿಯಾಗಲು ಇಷ್ಟು ಸಾಕಲ್ಲವೇ? ಇಂಥವರ ಮುಖ ಚಹರೆಗಳನ್ನು, ವೇಷ ಭೂಷಣಗಳನ್ನು ಅನುಭವಿ ಚಾಲಕ ತನ್ನ ತಲೆಯೆಂಬ ಪೆನ್‌ಡ್ರೈವಿನಲ್ಲಿ ಸಂಗ್ರಹ ಮಾಡಿಟ್ಟುಕೊಂಡು ನಂತರದಲ್ಲಿ ವಿಚಾರಿಸುತ್ತಾ ಬರುವ ಖಾಕಿಧಾರಿಗಳಿಗೆ ಯಥಾವತ್ ವಿವರ ಒಪ್ಪಿಸುವುದು ಒಂದು ಪರಿಪಾಠವೇ ಆಗಿಹೋಗಿರುತ್ತದೆ.

ಹೀಗೆ ಕಾನೂನು ಪಾಲಕರೊಂದಿಗೂ ಕಾನೂನು ಭಂಜಕರೊಂದಿಗೂ ಸಮಾನ ಅಂತರವಿಟ್ಟುಕೊಂಡು, ಸಮನ್ವಯ ಕಾಪಾಡಿಕೊಂಡು ಹೊಟ್ಟೆಪಾಡು ನಡೆಸಿಕೊಂಡು ಹೋಗುವ ಬಡಪಾಯಿ ಆಟೊ ಚಾಲಕನಿಗೆ 'ಹ್ಯಾಟ್ಸಾಫು' ಹೇಳುವವರಿಲ್ಲವೆನ್ನುವುದೊಂದು ಕೊರತೆ. ಆಟೊ ಅಂದರೆ ಮೂಗು ಮುರಿಯುವವರೇ ಹೆಚ್ಚು. ಇಂಥ ಕಾಲದಲ್ಲೂ ಕೆಲವು ಆಟೊ ಮಂದಿ ತಮ್ಮ ಆಟೊದಲ್ಲಿ ಬಿಟ್ಟುಹೋದ ಲ್ಯಾಪ್‌ಟಾಪು, ಪರ್ಸು, ವ್ಯಾನಿಟಿ ಬ್ಯಾಗುಗಳನ್ನು ಆಗಾಗ್ಗೆ ಪೊಲೀಸು ಠಾಣೆಗೆ ಹಿಡಿದುಕೊಂಡು ಬಂದು 'ಯಾರೋ ಅದ್ಯಾವ ಗ್ಯಾನದಲ್ಲೋ ಬಿಟ್ಟು ಹೋಗ್ಬುಟ್ಟವ್ರೆ... ಕೇಳ್ಕಂಡು ಬಂದ್ರೆ ತಲುಪಿಸ್ಬಿಡಿ ಸಾರ್...' ಅಂತ ಎಡತಾಕುವುದಲ್ಲದೆ, ಮತ್ತೆ ಒಂದೆರಡು ದಿನ ಬಿಟ್ಟುಕೊಂಡು ಬಂದು 'ಅವ್ರಿಗೆ ತಲುಪಿತಾ ಸಾಯೇಬ್ರೇ...' ಅಂತ ಕ್ರಾಸುಚೆಕ್ ಮಾಡಿ ತಲುಪಿದ್ದರೆ ಸಮಾಧಾನ ಪಟ್ಟುಕೊಂಡು ವಾಪಸು ಹೋಗುವವರಿದ್ದಾರೆ. ಇಲ್ಲದಿದ್ದರೆ ಆಟೊ ಚಾಲಕರ ಹೆಸರು, ಮೊಬೈಲ್ ನಂಬರು ಪಡೆದುಕೊಳ್ಳುವುದು, ಕಳೆದುಕೊಂಡ ವಸ್ತುವಿನ ಮಾಲೀಕರು ಸಿಕ್ಕಾಗ ಅದೇ ಆಟೊ ಚಾಲಕರನ್ನು ಕರೆಸಿ ಅವರ ಕೈಯಿಂದಲೇ ಕಳೆದಿದ್ದ ವಸ್ತುವನ್ನು ಕೊಡಿಸುವುದು. ಬಿಟ್ಟುಹೋದ ವಸ್ತುವನ್ನು ಪ್ರಾಮಾಣಿಕವಾಗಿ ತಂದು ಕೊಟ್ಟಿದ್ದಕ್ಕೆ ಡ್ರೈವರುಗಳಿಗೂ, ಆಟೊದಲ್ಲೇ ತಮ್ಮ ವಸ್ತುವನ್ನು ಬಿಟ್ಟು ಆಟೊ ಚಾಲಕನ ಪ್ರಾಮಾಣಿಕತೆಯನ್ನು ಪರೀಕ್ಷೆಗಿಟ್ಟ ಓನರುಗಳಿಗೂ ಒಟ್ಟಿಗೆ 'ಚಾಯ್' ಕುಡಿಸಿ ಕಳುಹಿಸುವ ಸಂಪ್ರದಾಯವೂ ಉಂಟು. ಇಂಥ ಸಂದರ್ಭಗಳಲ್ಲಿ ಪೊಲೀಸು ಇಲಾಖೆಯ ಮೇಲಾಧಿಕಾರಿಗಳು ಕೊಟ್ಟ ಕೆಲವು ಸರ್ಟಿಫಿಕೇಟುಗಳನ್ನು ಅಪೂರ್ವ ನಿಧಿ ಎಂಬಂತೆ ಲ್ಯಾಮಿನೇಷನ್ನು ಮಾಡಿಸಿ ವರ್ಷಾನುಗಟ್ಟಲೆ ಜತನದಿಂದ ಇಟ್ಟುಕೊಂಡಿರುವ ಚಾಲಕರಿದ್ದಾರೆ. ಇವತ್ತಿಗೂ ಅವರಲ್ಲಿ ತಾವು ತೋರಿದ ಪ್ರಾಮಾಣಿಕತೆಯ ಬಗ್ಗೆ ಹೆಮ್ಮೆ ಇದೆ. ಅಂತಹ ಚಾಲಕರನ್ನು ಹೆಚ್ಚಾಗಿ ಗುರುತಿಸಿ ಪ್ರೋತ್ಸಾಹಿಸುವ ಅನಿವಾರ್ಯತೆಯಂತೂ ಇದ್ದದ್ದೇ.

ನಮ್ಮ ಟ್ರಾಫಿಕ್ಕು ಪೊಲೀಸರಿಗೂ ಆಟೊಗಳಿಗೂ ಗಳಸ್ಯ ಕಂಠಸ್ಯ ಇದ್ದಂತೆ. ತೇಲಲೀಯದು ಮುಳುಗಲೀಯದು ಅನ್ನುವಂತಹ ಸಂಬಂಧವೊಂದನ್ನು ಅವರೊಂದಿಗೆ ಕಾಯ್ದುಕೊಳ್ಳುವುದು ಕರ್ತವ್ಯದ ದೃಷ್ಟಿಯಿಂದ ಅಗತ್ಯವೂ ಹೌದು. ರಸ್ತೆಯಲ್ಲಿ ಅಪಘಾತವಾಗಿ ಬಿದ್ದ ಗಾಯಾಳುವನ್ನು ಮೇಲೆತ್ತಿ ಆಸ್ಪತ್ರೆ ಸೇರಿಸಲು ಅಂತಹ ಸಂದರ್ಭಗಳಲ್ಲಿ ಆಟೊಗಳಲ್ಲದೆ ಬೇರೆ ಯಾವ ಮಹಾನುಭಾವರೂ ಮುಂದೆ ಬರುವುದಿಲ್ಲ. ಆಂಬುಲೆನ್ಸುಗಳನ್ನು ಕರೆದರೂ ನಗರದ ಕಿಕ್ಕಿರಿದ ಸಿಗ್ನಲುಗಳನ್ನೆಲ್ಲಾ ದಾಟಿಕೊಂಡು ಅಪಘಾತ ಸ್ಥಳಕ್ಕೆ ಬರುವವರೆಗೂ ಗಾಯಾಳು ಕಾಯಬೇಕಲ್ಲ?